ಕೂಡ ಆಯ್ಕೆ ಆಗಿರುತ್ತಾರೆ. ಇತ್ತೀಚೆಗೆ ನಡೆದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ತೃತೀಯ ಬಿ.ಕಾಂ. ಪರೀಕ್ಷೆಯ ಫಲಿತಾಂಶವನ್ನು ತಡೆಹಿಡಿದು ೨ ಪ್ರಶ್ನೆ ಪತ್ರಿಕೆಗಳು ಕಾಲೇಜೊಂದರಲ್ಲಿ ಬಹಿರಂಗವಾಗಿದೆ ಎಂಬ ಅಪಾದನೆಯ ಮೇಲೆ ಸೂಕ್ತ ವಿಚಾರಣೆ ನಡೆಸಿ ತೀರ್ಮಾನ ಕೈಗೊಳ್ಳಬೇಕೆಂದು ನಿರ್ಧರಿಸಿದೆ. ೧೯೬೦ ಮತ್ತು ೨೯೬೦ ವರ್ಷ ಬಿ.ಕಾಂ. ಪರೀಕ್ಷಾ ಫಲಿತಾಂಶವನ್ನು ೧೦-೬-೧೯೬೦ರಂದು ಪ್ರಕಟಿಸಲಾಗುತ್ತದೆ.

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕೋಶಾಲ ನಗರದಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ಕ್ಯಾಥೊಲಿಕ್ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಬ ಸಂಸ್ಥೆ ಮುಂದೆ ಬಂದಿದ್ದು, ಇದರ ಬಗ್ಗೆ ಸ್ಥಳೀಯ ತನಿಖಾ ಸಮಿತಿಯು ವರದಿಯನ್ನು ಸಲ್ಲಿಸಿ ಕಾಲೇಜಿಗೆ ಸಂಯೋಜನೆಯನ್ನು ಶಿಫಾರಸ್ಸು ಮಾಡಿರುವುದಿಲ್ಲ. ಆದರೆ ಆ ವರದಿಯನ್ನು ಶೈಕ್ಷಣಿಕ ಮಂಡಳಿ ಪರಿಶೀಲಿಸಿ ಕೊಡಗು ಜಿಲ್ಲೆಯಲ್ಲಿ ಯಾವುದೇ ಇಂಜಿನಿಯರಿಂಗ್ ಕಾಲೇಜು ಇದುವರೆಗೆ ಸ್ಥಾಪನೆಯಾಗದ ಕಾರಣ ಸದರಿ ಇಂಜಿನಿಯರಿಂಗ್ ಕಾಲೇಜು ಬೇಕಾದ ಸಲಕರಣೆ ಮತ್ತು ಸವಲತ್ತುಗಳನ್ನು ಹೊಂದುವುದಾದರೆ ಮಾತ್ರ ಸಂಯೋಜನೆಯನ್ನು ಶಿಫಾರಸ್ಸು ಮಾಡಬಹುದು ಎಂದು ಸೂಚಿಸಿದೆ, ಶೈಕ್ಷಣಿಕ ಮಂಡಳಿಯ ನಿರ್ಧಾರವನ್ನು ಸಿಂಡಿಕೇಟ್ ಅನುಮೋದಿಸಿದ್ದುದರಿಂದ ಇವುಗಳೆಲ್ಲವುಗಳ ನಡೆವಳಿಕೆಗಳೊಂದಿಗೆ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಎಚ್. ಬಿ. ಯಂಕಾ ನಾಯಕ್.—ಹಾಜರಿರಲಿಲ್ಲ.

ಶ್ರೀ ಆರ್. ಎನ್. ನಾಯಕ್. —ಅಧ್ಯಕ್ಷರೆ, ೬ನೇ ತಾರೀಖಿನ ದಿವಸ ಎರಡು ನೋಟೀಸ್‌ಗಳನ್ನು ಷಿಷಿಳರಲ್ಲಿ ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು.—ನೀವು ಓದಿ ಭಾಷಣ ಜೇಡ. ಪ್ರತಿ ದಿವಸ ನಿಮಗೆ ಕಲಿಸಬೇಕೇ ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಷಿಷಿಳರಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ಹೇಳಿ ಎಂದು ಹೇಳಿ.

ಶ್ರೀ ಆರ್. ಎನ್. ನಾಯಕ್.—ನಾನು ೬ನೇ ತಾರೀಖು ಷಿಷಿಳನೇ ಕಲಮಿನ ಕೆಳಗೆ ನಾನು ಇಲ್ಲಿ ಎರಡು ಸೂಚನೆಗಳನ್ನು ಓದಿದ್ದೇನೆ. ಅದಕ್ಕೆ ಇನ್ನೂ ಉತ್ತರ ಕೊಟ್ಟಿಲ್ಲ. ಅದನ್ನು ಕೊಡಲಿ. ಅದಾದ ಮೇಲೆ ಇನ್ನೊಂದು ಇದೆ.

ಅಧ್ಯಕ್ಷರು. —ನಿಮ್ಮ ನೋಟೀಸನ್ನು ನಾನೇ ಓದಲೇ ?

೮) ಹೊನ್ನಾವರ ತಾಲ್ಲೂಕಿನ ನಗರ ಬಸ್ತಿಕೇರಿ ಮಂಡಲ ಪಂಚಾಯತ್ ಕ್ಷೇತ್ರದ ಬೇಗೋಡಿ ಗ್ರಾಮದಲ್ಲಿ ಕಾಡಾನೆಗಳ ಹಾವಳಿಯಿಂದ ನೊಂದವರಿಗೆ ಪರಿಹಾರಕ್ಕೆ ಒತ್ತಾಯ.

ಶ್ರೀ ಆರ್. ಎನ್. ನಾಯಕ್.—ಹೊನ್ನಾವರ ತಾಲ್ಲೂಕಿನ ನಗರ ಬಸ್ತಿಕೇರಿ ಮಂಡಲ ಪಂಚಾಯತ್ ಕ್ಷೇತ್ರದಲ್ಲಿರುವ ಬೇಗೋಡಿ ಗ್ರಾಮವು ಸಹ್ಯಾದ್ರಿಯ ಮಡಿಲಲ್ಲಿರುವ ಚಿಕ್ಕಹಳ್ಳಿ. ಅಲ್ಲಿ ಕಾಡಾನೆಯು ಕಾಟ ವಿಪರೀತವಾಗಿ ನೆಟ್ಟ ತೆಂಗು, ಅಡಿಕೆ ಬಾಳೆ ಗಿಡಗಳನ್ನು ಆನೆ ತಿಂದೂ ತುಳಿದು ನಾಶಪಡಿಸಿರುತ್ತದೆ. ಈ ಬಗ್ಗೆ ಅಲ್ಲಿ ನಿವಾಸಿ ಪರಮೇಶ್ವರ ಹೆಗಡೆಯವರು ಮಾನ್ಯ ಮುಖ್ಯಮಂತ್ರಿಗಳಿಗೆ ೨ ಅರ್ಜಿ, ಅರಣ್ಯ ಮಂತ್ರಿಗಳಿಗೆ ೧ ಅರ್ಜಿ ಕೆನರಾ ಸರ್ಕಲ್ ಕನ್ಸರ್‌ವೇಟರ್ ಅವರಿಗೆ ೪ ಅರ್ಜಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಹೊನ್ನಾವರ ಇವರಿಗೆ ಮೂರು ಅರ್ಜಿ ಗೇರಸಪ್ಪಾ ಆರ್.ಎಫ್.ಒ. ಅವರಿಗೆ ೯ ಅರ್ಜಿ ಹಾಗೂ ಕಾರವಾರದ ಜಿಲ್ಲಾ ಪರಿಷತ್ ಹಾಗೂ ಜಿಲ್ಲಾಧಿಕಾರಿಗಳಿಗೆ ಅರ್ಜಿಗಳನ್ನು ಬರೆದು ಸೋತು ಸುಣ್ಣವಾಗಿದ್ದಾರೆ. ಯಾರಿಂದಲೂ ಈ ತನಕ ಪರಿಹಾರ ಇಲ್ಲವೆಂದು ತಿಳಿಸುತ್ತಾರೆ. ಹಲವಾರು ರೈತರ ಬೆಳೆ ನಾಶವಾಗಿದೆಯಲ್ಲದೆ ಪರಮೇಶ್ವರ ಹೆಗಡೆಯವರ ಅಜ ಮಾಸ ೫೦,೦೦೦-೦೦ ರೂಪಾಯಿಗಳ ಬೆಳೆ ನಾಶವಾಗಿದೆ,

ಈಗಲಾದರೂ ಸ್ಥಳಕ್ಕೆ ಭೇಟಿ ನೀಡಿ ನೊಂದವರಿಗೆ ಪರಿಹಾರ ಒದಗಿಸುವ ಬಗ್ಗೆ ಆದೇಶಿಸಲು ಅರಣ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ಖಾತೆ ರಾಜ್ಯ ಮಂತ್ರಿ) —ಶ್ರೀ ಪರಮೇಶ್ವರ ಮಹಾಬಲೇಶ್ವರ ಹೆಗಡೆ ಬೇಗೋಡಿ ಗ್ರಾಮ ಇವರು ತಮ್ಮ ಮಾಲ್ಕಿ ಸರ್ವೆ ನಂ. ೧೨ೆರಲ್ಲಿ ಎರಡು ಬಾರಿ ಕಾಡಾನೆಗಳು ಧಾಳಿ ಮಾಡಿ ಭತ್ತ, ತೆಂಗು, ಬಾಳೆ ಗಿಡಗಳು ನಾಶವಾದ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ಅವರಿಗೆ ಪರಿಹಾರ ಧನ ಮಂಜೂರು ಮಾಡಬೇಕೆಂದು ಕೋರಿ ಅರ್ಜಿ ಸಲ್ಲಿಸುತ್ತಾರೆ.

ಗೇರುಸೊಪ್ಪು ವಲಯದ ಸಿಬ್ಬಂದಿಗಳು ದಿನಾಂಕ ೧೯–೧೦–೧೯೮೭ ಮತ್ತು ೨೫–೧೨–೧೯೮೭ ರಂದು ಸ್ಥಳ ಪರೀಕ್ಷೆ ಮಾಡಿ ಪಂಚನಾಮೆಯೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಹೊನ್ನಾವರ ಅವರ ಕಛೇರಿಗೆ ವರದಿ ಸಲ್ಲಿಸಿರುತ್ತಾರೆ. ಉಪ ಅರಣ್ಯ ಸಂರಕ್ಷಣಾಧಿಕಾರಿ ಹೊನ್ನಾವರ ಅವರು ಸ್ವತಃ ಸ್ಥಳ ತಪಾಸಣೆ ಮಾಡಿ ಅವರಿಗೆ ಹಾನಿಯಾದುದನ್ನು ಪರಿಶೀಲಿಸಿ ರೂ. ೨,೦೦೦–೦೦ ಪರಿಹಾರ ಧನವನ್ನು ಅರ್ಜಿದಾರರಿಗೆ ಈಗಾಗಲೇ ನೀಡಿರುತ್ತಾರೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಪರಿಹಾರ ಧನ ನೀಡಲು ಕೇಳಿಕೊಂಡ ಮೊತ್ತ ಹೆಚ್ಚಾಗಿ ಇದ್ದುದರಿಂದ ಮತ್ತು ಪಂಚನಾಮೆಯಲ್ಲಿ ವಿವರಿಸಿದ ಮಾಹಿತಿಗೂ ಅದಕ್ಕೂ ವ್ಯತ್ಯಾಸಗಳಿದ್ದುದರಿಂದ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ಅವರು ವಿವರಗಳನ್ನು ಕೋರಿದ್ದರು. ಈ ಪ್ರಕರಣ ಕುರಿತು ಮರು ವಿಚಾರಣೆ ಮಾಡುವುದು ಅವಶ್ಯವೆಂದು ಕಂಡುಬಂದಿದ್ದರಿಂದ ಪರಿಹಾರಧನ ನೀಡುವಲ್ಲಿ ವಿಳಂಬವಾಗಿತ್ತು.

ಇಲಾಖೆಯು ಇಂಥ ಪ್ರಕರಣಗಳಲ್ಲಿ ಪರಿಹಾರಧನವನ್ನು ತಾತ್ಕಾಲಿಕ ತೊಂದರೆಯನ್ನು ನಿವಾರಿಸಲು ಕೊಡಲಾಗುತ್ತದೆಯೇ ಹೊರತು ಪೂರ್ಣ ನಾಶವಾದದ್ದಕ್ಕೆ ಅದರ ಬೆಲೆ ನೀಡುವುದಿಲ್ಲ.

ಜೆ–೨೦ ಪಿ. ಎಂ.

೯) ಬೀದರ್ ಜಿಲ್ಲೆಯ ಪ್ರಾಥಮಿಕ ಶಾಲೆಗಳಿಗೆ ಉರ್ದು ಉಪಾಧ್ಯಾಯರ ನೇಮಕಕ್ಕೆ ಒತ್ತಾಯ

SRI MOHAMMED LAIQUDDIN.—The Primary, Middle and High Schools in Bidar district are running short of staff, There is total stagnation in the field of Primary Education in Urdu Medium Schools. I have made requests for appointment of at least 150 Urdu Teachers to meet the needs of ever-growing strenth of children at Primary and Middle Schools. New classes have been added in several Primary and Middle Schools without any increase in teaching staff. It is causing extra load on the teaching staff and at the same time the students career is being adversely affected. The Hon'ble Minister for Primary and High Schools had promised to sanction the Urdu Primary Schools Teachers on the occasion of his visit to Bidar, even though about a period of one year is passed, But no steps seems to have been taken to solve the problems of the people of minority, The District Minister as well as the Zilla Parishad have also represented this matter for sanction of Urdu Teacher posts. In spite of this, not a single appointment is made. It shows the total neglect on the part of the Government on this serious issue of linguistic minority.

The Schools have opened from 1-6-1988. The problem of appointment of teachers is quite necessary to be tackled on top priority basis. Otherwise, the life of the school-going children is